ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
DSERT NO 4, 100 FT RING ROAD, BANASHANKARI 3RD STAGE BENGALURU - 085
E-MAIL: dsertkar@gmail.com , Website: http://dsert.kar.nic.in
Phone : 080 26422372 26422373 26422374 Fax: 26422377

ಇಟಿಸಿ–6/ಮಾ.ಹ.ಅಧಿ/06/2017–18

ದಿನಾಂಕ:13.07.2017

**ಸುತ್ತೋಲೆ**

ವಿಷಯ:ಮೌಲ್ಯಮಾಪನಕ್ಕೆ ಸಂಬಧಿಸಿದಂತೆ ಶಾಲೆಗಳಲ್ಲಿ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಂತದ ತರಗತಿಗಳಿಂದ 9ನೇ ತರಗತಿಯವರೆಗೆ 2012-13ರ ಶೈಕ್ಷಣಿಕ ಸಾಲಿನಿಂದ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು (Continuous & Comprehensive Evaluation) ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಆರ್.ಟಿ.ಇ. ಸೆಕ್ಷನ್ 29(ಹೆಚ್) ಅನ್ವಯ ಅನುಷ್ಠಾನಕ್ಕೆ ತರಲಾಗಿದೆ. ಕನ್ನಡ ಮಾಧ್ಯಮದ ಶಾಲೆಗಳಲ್ಲಿ 1 ರಿಂದ 3ನೇ ತರಗತಿಯವರೆಗೆ ನಲಿಕಲಿ ಜಾರಿಯಲ್ಲಿದ್ದು, ಈಗಾಗಲೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅಳವಡಿಸಲಾಗಿದೆ. ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮೌಲ್ಯಮಾಪನಕ್ಕೆ ಸಂಬಂಧಿಸಿದ ಹಾಗೆ ದಾಖಲೆಗಳನ್ನು ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ನಲಿಕಲಿ ತರಗತಿಗಳು (1 ರಿಂದ 3) ಹಾಗೂ ಸೇತುಬಂಧಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ದಾಖಲೆಗಳನ್ನು ನಿರ್ವಹಿಸುವ ಅವಶ್ಯಕತೆಯಿರುವುದಿಲ್ಲ. ಪ್ರಗತಿನೋಟ ದಿನಚರಿಯಲ್ಲಿ ಮಟ್ಟಿಲುವಾರು ದಾಖಲೆಗಳನ್ನು ನಿರ್ವಹಿಸಬೇಕು.

ರಾಜ್ಯದ ಎಲ್ಲಾ ಶಿಕ್ಷಕರು ದಿನಚರಿ/ಪಾಠಟಿಪ್ಪಣಿ, ವಾರ್ಷಿಕ ಪಾಠಯೋಜನೆ, ವಿದ್ಯಾರ್ಥಿಗಳ ವೈಯಕ್ತಿಕ ವಹಿ, ಕ್ರೋಢೀಕೃತ ವಹಿಗಳನ್ನು ಸ್ವತಃ ಕೈಬರಹದಲ್ಲಿ ಬರೆಯಬಹುದು ಅಥವಾ ಗಣಕೀಕೃತ ರೂಪದಲ್ಲಾದರೂ ನಿರ್ವಹಿಸಬಹುದು. ಆದರೆ ಪ್ರತಿ ವರ್ಷ ಶಾಲಾ ಮುಖ್ಯಸ್ಥರಿಂದ ಎಲ್ಲಾ ದಾಖಲೆಗಳನ್ನು ದೃಢೀಕರಿಸಿಟ್ಟುಕೊಳ್ಳಬೇಕು. ಇಲಾಖಾ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದಾಗ/ತಪಾಸಣೆಯ ಸಂದರ್ಭದಲ್ಲಿ ಪರಿಶೀಲನೆಗೆ ನಿರ್ವಹಿಸಿರುವ ದಾಖಲೆಗಳನ್ನು ಒದಗಿಸಬೇಕು. ಮುಖ್ಯ ಶಿಕ್ಷಕರು ಶಾಲಾ ಪ್ರಾರಂಭದಲ್ಲಿ ಎಲ್ಲಾ ಶಿಕ್ಷಕರ / ದಿನಚರಿ ಪಾಠಯೋಜನೆ / ವಾರ್ಷಿಕ ಪಾಠ ಹಂಚಿಕೆ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಬೇಕು.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.

ಪ್ರತಿಗಳನ್ನು

1. ರಾಜ್ಯದ ಎಲ್ಲಾ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.